ಇಂದು ದಿನಾಂಕಃ **24.01.2019** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಬಿ ವಕೀಲರಿಂದಃ ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿ ಬರೆದಿರುವ ವಿಚಾರಗಳು ಮತ್ತು ನ್ಯಾಕ್ಕೆ ಹಾಜರು ಮಾಡಿರುವ ದಾಖಲೆಗಳ ಬಗ್ಗೆ ಗೊತ್ತು ಎಂದರೆ ಸರಿ. ನಾನು ಎಲ್ಲಾ ವಾದಿಗಳ ಪರವಾಗಿಯಾ ಸಹ ಸಾಕ್ಷ್ಯ ಹೇಳುತ್ತಿದ್ದೇನೆ. **1** ನೇ ವಾದಿಯನ್ನು ಹೊರತುಪಡಿಸಿ ಬೇರೆಯರು ನನಗೆ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿ. ನಿಪಿ **1** ಎಂದು ಗುರುತಿಸಲಾಗಿರುವ ಪತ್ರವನ್ನು ನಾನೇ ತಂದಿರುತ್ತೇನೆ. ಅದಕ್ಕೆ ಹಣವನ್ನು ನಾನೇ ಪಾವತಿಸಿರುತ್ತೇನೆ. ಅಧಿಕಾರ ಪತ್ರವನ್ನು ನೋಟರಿಯ ಬಳಿ ನಾನೇ ಮಾಡಿಸಿರುತ್ತೇನೆ. ಆ ದಿನ ನನ್ನ ತಂದೆ ಬಂದು ಸಹಿ ಹಾಕಿರುತ್ತಾರೆ. ನನ್ನ ತಂದೆಯೇ ನಿಪಿ **1** ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಯಾವ ದಿನಾಂಕದಂದು ನಿಪಿ **1** ನ್ನು ಖರೀದಿಸಲಾಗಿದೆ ಎಂದು ಹೇಳಲು ಆಗುವುದಿಲ್ಲ, ಸದರಿ ನಿಪಿ **1** ನ್ನು ಖರೀದಿಸಿದ ದಿನದಂದೇ ಅಧಿಕಾರ ಪತ್ರವನ್ನು ಬರೆಯಲಾಗಿರುತ್ತದೆ

ನನ್ನ ಹಾಗೂ **1** ನೇ ವಾದಿ, ಹೊನ್ನಯ್ಯ ಮತ್ತು ಕುಳ್ಳಮ್ಮ ರವರ ವಿರುದ್ಧ **8** ನೇ ಪ್ರತಿವಾದಿ ದೂರು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ **1** ನೇ ವಾದಿ ನ್ಯಾಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿ. ಸದರಿ ಕ್ರಿಮಿನಲ್ ಪ್ರಕರಣದ ವಿಚಾರ ನನ್ನ ತಂದೆಗೆ ಗೊತ್ತಿತ್ತು ಎಂದರೆ ಗೊತ್ತಿಲ್ಲ ಸದರಿ ಪ್ರಕರಣ ಮುಕ್ತಾಯವಾಗುವವರೆಗೂ ನನ್ನ ತಂದೆ ನ್ಯಾಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿ. ನನ್ನ ತಂದೆ ಎಸಿ ನ್ಯಾದಲ್ಲಿ ದಾಖಲಾಗಿದ್ದ ಪ್ರಕರಣ, ಸಿವಿಲ್ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ ಹುಣಸೂರು ಮತ್ತು **3** ನೇ ಪ್ರತಿವಾದಿ ನನ್ನ ತಂದೆಯ ವಿರುದ್ಧ ಸಲ್ಲಿಸಿದ್ದ ದಾವೆಗೂ ಹಾಜರಾಗುತ್ತಿದ್ದರು ಎಂದರೆ ಸರಿ. ಸದರಿ ಎಲ್ಲಾ ದಾವೆ ಮತ್ತು ಪ್ರಕರಣಗಳಲ್ಲಿ ನನ್ನ ತಂದೆಯೇ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣಕ್ಕೆ ನನ್ನ ತಂದೆಯೇ ಮಾಹಿತಿ ನೀಡಿರುತ್ತಾರೆ ಎಂದರೆ ಸರಿ.

ಕೆಂಗ ಅಲಿಯಾಸ್ ಕೆಂಗಯ್ಯರವರು **1980** ರಲ್ಲಿ ಮರಣ ಹೊಂದಿರಬಹುದು. ಆ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನ್ಯಾಕ್ಕೆ ಹಾಜರು ಮಾಡಿಲ್ಲ. ದಾವಾ ಆಸ್ತಿಯ ಮೂಲ ಸರ್ವೆ ನಂ. **70** ಆಗಿರುತ್ತದೆ. ಸದರಿ ಸರ್ವೆ ನಂ.ನಲ್ಲಿ ಒಟ್ಟು **4** ಎಕರೆ **18** ಗುಂಟೆ ಜಮೀನು ಇರುತ್ತದೆ. ಪ್ರತಿವಾದಿ **1** ಮತ್ತು **3** ರವರ ಪ್ರಕಾರ ಸದರಿ ಸರ್ವೆ ನಂ.ನಲ್ಲಿ **10** ಎಕರೆ **7** ಗುಂಟೆ ಜಮೀನು ಮತ್ತು ಅದರಲ್ಲಿ **15** ಗುಂಟೆ ಖರಾಬು ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. **70** ರಲ್ಲಿ ಎಷ್ಟುಪೋಡುಗಳಾಗಿವೆ ಎಂದು ಗೊತ್ತಿಲ್ಲ. ದಿಃ **13.07.1944** ರಲ್ಲಿ ಸರ್ವೆ

ನಂ. 70 ನಾಲ್ಕು ಪೋಡುಗಳಾಗಿರುತ್ತವೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 70/1 ಕ್ಕೆ ಕುಚ್ಚೇಗೌಡರ ಮಗ ಕುಚ್ಚೇಗೌಡ ಮಾಲೀಕರಾಗಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 70/2 ರ 5 ಗುಂಟೆ ಜಮೀನಿಗೆ ಹೊನ್ನನ ಮಗ ಕೆಂಗ ಮಾಲೀಕರಾಗಿರುತ್ತಾರೆ ಎಂದರೆ ಸರಿ. ಸರ್ವೆ ನಂ. 70/3 ರ 4 ಎಕರೆ 18 ಗುಂಟೆಗೆ ಸಣ್ಣೇಗೌಡರ ಮಗ ಅಂಕೇಗೌಡರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಅಂಕೇಗೌಡ ನನ್ನ ತಾತ ಕೆಂಗ ಅಲಿಯಾಸ್ ಕೆಂಗಯ್ಯ ರವರಿಗೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂ. 70/4 ಅಂಕೇಗೌಡರ ಮಗ ಸಿದ್ದೇಗೌಡರವರಿಗೆ ಸೇರಿರುತ್ತದೆ ಎಂದರೆ ಗೊತ್ತಿಲ್ಲ.

ಸರ್ವೆ ನಂ. 70/3 ರ 4 ಎಕರೆ 18 ಗುಂಟೆ ಪೈಕಿ 2 ಗುಂಟೆಯನ್ನು 1950 ರಲ್ಲಿ ಯಾಲಕ್ಕಿ ಬಿನ್ ಲಕ್ಕರವರಿಗೆ ಅಂಕೇಗೌಡ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಕ್ರಯದ ಆಧಾರದಂತೆ ದಿಃ 24.02.1950 ರಂದು ಸರ್ವೆ ನಂ. 70/3 ರ 4 ಎಕರೆ 18 ಗುಂಟೆ 2 ಪೋಡಾಗಿದ್ದು, ಸರ್ವೆ ನಂ. 70/3 ಎ ಎಂದು ಅಂಕೇಗೌಡರ ಹೆಸರಿನಲ್ಲಿ 4 ಎಕರೆ 16 ಗುಂಟೆ ಮತ್ತು ಸರ್ವೆ ನಂ. 70/3 ಬಿ ಎಂದು ಲಕ್ಕರವರ ಹೆಸರಿನಲ್ಲಿ 2 ಗುಂಟೆ ಜಮೀನಿನ ಖಾತೆಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ 8 ರ ಮೂಲ ಪ್ರತಿ ಸುಟ್ಟು ಹೋಗಿರುತ್ತದೆ.

ಈನಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.